‘ಊಟ ಮಾಡಬೇಕೆಂದೇನಿಲ್ಲ’ ಅವನ ತುಂಬಿಬಂದ ಹೃದಯ ಮರುನುಡಿಯಿತು: ‘ನಾನು ಹೋಗಲೇ, ನನಗೆ ಮಾಡಿದ ಸಹಾಯಕ್ಕೆ...’ ಆತ ತಡೆದ.

ಅವಳು ಮೆಲ್ಲಗೆ ಹೇಳಿದಳು: ‘ದೇಶಪ್ರೇಮಿಗಳಿಗೆ ಸಹಾಯ ಮಾಡಬೇಕಾದುದು ಪ್ರತಿಯೊಬ್ಬರ ಕರ್ತವ್ಯವಲ್ಲವೇ?’

‘ದೇಶಪ್ರೇಮಿ!’ ಜಗದೀಶ ಚಕಿತನಾದ:

‘ಅದು ಯಾರೆಂಬುದೇ ಈಗಿರುವ ಸಂದೇಹ!’

‘ಏನೇ ಆದರೂ ಊಟ ಮಾಡಿ ಹೋಗಬಹುದು.’

‘ತಡವಾದರೆ ತೊಂದರೆಯೇ ಅಲ್ಲವೇ?’

‘ಅಪ್ಪ ಈಗೇನೂ ಬರಲಾರರು’ ಅವಳು ಲಜ್ಜೆಯಿಂದ ವಿನಮ್ರವಾಗಿ, ‘ಮತ್ತೆ... ಅರೆಸ್ಟ್ ಮಾಡಿಯೇ ಬರುವುದು...’

ಅವರ ಕಣ್ಣುಗಳು ಮುಗುಳ್ನಗೆ ಸೂಸಿದವು. ಅವಳು ಕೇಳಿದಳು: ‘ಪೊಲೀಸಿನವರ ಅನ್ನ ಊಟ ಮಾಡಲು ಅಸಹ್ಯವಾಗಬಹುದು. ಅಲ್ಲವೇ!’

‘ಸ್ವಲ್ಪವೂ ಅಸಹ್ಯವಿಲ್ಲ.’ ಆತ ವಿಷಾದದಿಂದ ಎಂದ, ‘ನನಗೆ ಸರಕಾರಿ ನೌಕರರ ಬಗೆಗೂ ಯಾವುದೇ ವಿರೋಧವಿಲ್ಲ. ಪೊಲೀಸರೊಡನಾದರೂ – ಅನುಕಂಪವೇ ಇರೋದು. ಆದರೆ ಒಂದು ಸತ್ಯ: ಮೃಗೀಯತೆಯೇ ತುಂಬಿರುವ ಮನುಷ್ಯನಲ್ಲಿ ಸ್ವಲ್ಪವಾದರೂ ಇರುವ ಸದ್ಗುಣಗಳು ಸರಕಾರದ ನೌಕರನಾಗುತ್ತಿದ್ದಂತೆ ವಿಶೇಷವಾಗಿ ಪೊಲೀಸಾಗುವುದರೊಡನೆ ಮರೆಯಾಗಿ ಬಿಡುವುದನ್ನು ಕಾಣಬಹುದು’. ಹಾಗೆ ಮುಂದುವರಿದು ಆತ ನೌಕರರ ಭ್ರಷ್ಟಾಚಾರವನ್ನು ಜನರ ಅಸಹಾಯಕತೆ ಇತ್ಯಾದಿಗಳನ್ನು ವಿವರಿಸಿದ:

‘ಜನರ ಬೆವರಿನ ಅಂಶದಿಂದಲೇ ಬದುಕುವ ನೌಕರರೂ ಆಡಳಿತಗಾರರೂ!’

ಆತ ಉಸಿರಾಡುವ ಸಲುವಾಗಿ ಸ್ವಲ್ಪ ತಡೆದ. ಭಾರ್ಗವಿ ಕೇಳಿದಳು:

‘ಇದೆಲ್ಲವನ್ನು ಹೇಳುತ್ತಿರುವುದು ಎಲ್ಲಿ ನಿಂತುಕೊಂಡು ಎಂದು ತಿಳಿದಿದೆಯಾ?’

‘ಗೊತ್ತಿದೆ.’

‘ಈಗ ತುಂಬಾ ಧೈರ್ಯ!’ ಅವಳು ತಮಾಷೆ ಮಾಡಿದಳು: ‘ಅದೇನು ಕೆನ್ನೆಯಲ್ಲಿ ಕರಿ ಅಂಟಿಕೊಂಡಿದೆ!’

ಜಗದೀಶ ತಕ್ಷಣ ಕೆನ್ನೆ ಒರೆಸಿಕೊಂಡ. ಅವಳು ನಕ್ಕಳು.

‘ನಾನು ಯೋಚಿಸಿದ್ದೆ – ಹಿಡಿದುಕೊಟ್ಟು ಸರಕಾರ ಹೇಳುವ ಹಣ ಪಡೆಯಬಹುದೆ!’

‘ಮತ್ತೆ ಯಾಕೆ ಹಿಡಿದು ಕೊಡಲು ಹಿಂಜರಿದುದು?’

‘ಅದನ್ನೆಲ್ಲ ಹೇಳೋಣ... ಊಟ ಮಾಡಿ!’

‘ಓ, ಆದೇಶ ಉಲ್ಲಂಘನೆ ಮಾಡಬಾರದಲ್ಲವೇ?’ ಆತ ಸಮ್ಮತಿಸಿದ. ಅವಳು ಎಲೆ ತೊಳೆದು ಒರೆಸಿ ಪ್ರೀತಿಯಿಂದ ಅನ್ನ ಬಡಿಸಿದಳು. ಆತ ಊಟ ಮಾಡಿದ.

‘ಇನ್ನು ನಾನು ಹೋಗಲೇ!’

‘ಎಲ್ಲಿಗೆ ಹೋಗುತ್ತೀರಿ?’

‘ಅದನ್ನು ಯೋಚಿಸಿಲ್ಲ!’ ಜಗದೀಶ ಬೆವರಿದ. ನಿಜವಾಗಿ ಹೋಗುವುದಾದರೂ ಎಲ್ಲಿಗೆ?

‘ಆ ರಾಘವ... ಆತನ...’

‘ರಾಘವ!’ ಜಗದೀಶ ನಕ್ಕ. ‘ಅಲ್ಲೆಲ್ಲೂ ಸುಳಿಯುವಂತಿಲ್ಲ. ಆತ ಡಿ.ಎಸ್.ಪಿ.ಯ ವಾಹನ ಚಾಲಕ. ನನ್ನ ಗೆಳೆಯರ ಬಳಿಗೆ ಎಲ್ಲಿಗೂ ಹೋಗುವಂತಿಲ್ಲ. ಅಲ್ಲೆಲ್ಲ ಅವರು ಬಲೆ ಬೀಸಿದ್ದಾರೆ!’